## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಗ್ರಾಮ ಸ್ವರಾಜ್-ಕರ್ನಾಟಕ ಪಂಚಾಯತಿ ಸಬಲೀಕರಣ ಯೋಜನೆಯಡಿ 2013-14 ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಗಣಕಯಂತ್ರಗಳನ್ನು ಸರಬರಾಜು ಮಾಡಿದ ಬಗ್ಗೆ ತನಿಖೆ ನಡೆಸಲು ರಚಿಸಿರುವ ವಿಚಾರಣಾ ಸಮಿತಿಯ ಕಾಲಾವಧಿ ವಿಸ್ತರಿಸುವ ಬಗ್ಗೆ.

ಓದಲಾಗಿದೆ:
1) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 179 ಗ್ರಾಸ್ವಯೋ 2015, ದಿನಾಂಕ 19.11.2015
2) ಸಮಸಂಖ್ಯೆಯ ಸರ್ಕಾರದ ಆದೇಶ, ದಿನಾಂಕ 29.02.2016, 06.06.2016 ಮತ್ತು ದಿನಾಂಕ ದಿನಾಂಕ 19.09.2016
3) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 13 ಗ್ರಾಸ್ವಯೋ 2016, ದಿನಾಂಕ 05.10.2016
4) ಅಧ್ಯಕ್ಷರು, ವಿಚಾರಣಾ ಸಮಿತಿ, ಗ್ರಾಮ ಸ್ವರಾಜ್ ರವರ ಪತ್ರ, ದಿ. 12.12.2016

***

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಗ್ರಾಮ ಸ್ವರಾಜ್ – ಕರ್ನಾಟಕ ಪಂಚಾಯತಿ ಸಬಲೀಕರಣ ಯೋಜನೆಯಡಿ 2013-14 ನೇ ಸಾಲಿನಲ್ಲಿ ರಾಜ್ಯದ 5629 ಗ್ರಾಮ ಪಂಚಾಯತಿಗಳಿಗೆ ಗಣಕ ಯಂತ್ರಗಳನ್ನು ಸರಬರಾಜು ಮಾಡಲು ಅನುಸರಿಸಿದ ಖರೀದಿ ಪ್ರಕ್ರಿಯೆ, ಸಂಗ್ರಹಣೆ, ಸರಬರಾಜು ಹಾಗೂ ವೆಚ್ಚ ಪಾವತಿಯ ಕುರಿತು ಕೂಲಂಕುಷವಾಗಿ ತನಿಖೆ ನಡೆಸಿ ವರದಿಯನ್ನು ಸಲ್ಲಿಸಲು ಶ್ರೀ ಜೆ.ಕೆ.ಅರೋರಾ, ಭಾ.ಆ.ಸೇ.(ನಿವೃತ್ತ) ರವರ ಅಧ್ಯಕ್ಷತೆಯಲ್ಲಿ ವಿಚಾರಣಾ ಸಮಿತಿಯನ್ನು ರಚಿಸಿ, ಸಮಿತಿಯು ಎರಡು ತಿಂಗಳೊಳಗೆ ವರದಿ ಸಲ್ಲಿಸುವಂತೆ ಮೇಲೆ ಓದಲಾದ (1) ರ ಆದೇಶದಲ್ಲಿ ತಿಳಿಸಲಾಗಿತ್ತು.

ಮಾಹಿತಿ ಸಂಗ್ರಹಣೆ ಹಾಗೂ ವಿಚಾರಣೆಗೆ ಹೆಚ್ಚಿನ ಕಾಲಾವಕಾಶದ ಅಗತ್ಯತೆ ಇದ್ದುದರಿಂದ ವಿಚಾರಣಾ ಸಮಿತಿಯ ಅವಧಿಯನ್ನು ಅಗತ್ಯಾನುಸಾರ ವಿವಿಧ ಹಂತಗಳಲ್ಲಿ ದಿನಾಂಕ 20.11.2016 ರವರೆಗೆ ಮೇಲೆ ಓದಲಾದ (2) ಮತ್ತು (3) ರ ಸರ್ಕಾರದ ಆದೇಶಗಳನ್ವಯ ವಿಸ್ತರಿಸಿ ಆದೇಶಿಸಲಾಗಿತ್ತು.

ಮುಂದುವರೆದು, ಮೇಲೆ ಓದಲಾದ (4) ರಲ್ಲಿ ವಿಚಾರಣೆಯು ತನಿಖಾ ಕಾರ್ಯವನ್ನು ಪೂರ್ಣಗೊಳಿಸಿದ್ದು, ಅಂತಿಮ ವರದಿ ಸಿದ್ಧಪಡಿಸಲು ಹಾಗೂ ಮುದ್ರಿಸಲು ಕಾಲಾವಕಾಶದ ಅಗತ್ಯ ಇರುವುದರಿಂದ ಸಮಿತಿಯ ಅವಧಿಯನ್ನು ದಿನಾಂಕ 10.01.2017 ರವರೆಗೆ ವಿಸ್ತರಿಸಿ ಆದೇಶಿಸಲು ಕೋರಿರುವ ಹಿನ್ನೆಲೆಯಲ್ಲಿ, ಸರ್ಕಾರವು ಸಮಿತಿಯ ಮನವಿಯನ್ನು ಪರಿಗಣಿಸಿ ವಿಚಾರಣಾ ಸಮಿತಿಯ ಅವಧಿಯನ್ನು ದಿನಾಂಕ 10.01.2017 ರವರೆಗೆ ವಿಸ್ತರಿಸಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 207 ಗ್ರಾಸ್ವಯೋ 2016, ಬೆಂಗಳೂರು, ದಿನಾಂಕ 29.12.2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಗ್ರಾಮ ಸ್ವರಾಜ್ – ಕರ್ನಾಟಕ ಪಂಚಾಯತಿ ಸಬಲೀಕರಣ ಯೋಜನೆಯಡಿ 2013-14 ನೇ ಸಾಲಿನಲ್ಲಿ ರಾಜ್ಯದ 5629 ಗ್ರಾಮ ಪಂಚಾಯತಿಗಳಿಗೆ ಗಣಕ ಯಂತ್ರಗಳನ್ನು ಸರಬರಾಜು ಮಾಡಲು ಅನುಸರಿಸಿದ ಖರೀದಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ತನಿಖೆ ನಡೆಸಲು ರಚಿಸಿರುವ ಶ್ರೀ ಜೆ.ಕೆ.ಅರೋರಾ, ಭಾ.ಆ.ಸೇ.(ನಿವೃತ್ತ) ರವರ ಅಧ್ಯಕ್ಷತೆಯ ವಿಚಾರಣಾ ಸಮಿತಿಯ ಅವಧಿಯನ್ನು ದಿನಾಂಕ 10.01.2017 ರವರೆಗೆ ವಿಸ್ತರಿಸಿ ಆದೇಶಿಸಿದೆ.

ಸದರಿ ವೆಚ್ಚವನ್ನು ಗ್ರಾಮ ಸ್ವರಾಜ್ – ಕರ್ನಾಟಕ ಪಂಚಾಯತಿ ಸಬಲೀಕರಣ ಯೋಜನೆಯ ಲೆಕ್ಕ ಶೀರ್ಷಿಕೆ 2515-00-101-0-80-(059) ರಡಿ ವೆಚ್ಚ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ.ಕೆ.ಕೆಂಪೇಗೌಡ)
ನಿರ್ದೇಶಕರು(ಪಂ.ರಾಜ್-1) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಮುಂದಿನ ಪುಟಕ್ಕೆ...

ಇವರಿಗೆ:

1) ಶ್ರೀ ಜೆ.ಕೆ.ಅರೋರಾ, ಭಾ.ಆ.ಸೇ.(ನಿವೃತ್ತ), ಅಧ್ಯಕ್ಷರು, ವಿಚಾರಣಾ ಸಮಿತಿ – ಗ್ರಾಮ ಸ್ವರಾಜ್ ಯೋಜನೆ.
2) ಶ್ರೀ ಮುನಾವರ್ ಅಹ್ಮದ್, ಅಪರ ಮುಖ್ಯಸ್ಥರು(ಹಣಕಾಸು), ಗ್ರಾಮ ಸ್ವರಾಜ್ ಯೋಜನೆ.
3) ಶ್ರೀ ಈಶ್ವರ ಬೈದೇರಿ, ಮುಖ್ಯಸ್ಥರು, ಗಣಕಯಂತ್ರ ವಿಭಾಗ, ಗ್ರಾಮ ಸ್ವರಾಜ್ ಯೋಜನೆ.
4) ಶ್ರೀ ಶಶಿಭೂಷಣ ದೇವೂರ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬೆಳಗಾವಿ ಜಿಲ್ಲಾ ಪಂಚಾಯತಿ.

ಪ್ರತಿ:

1) ಮಹಾಲೇಖಪಾಲರು, ಕರ್ನಾಟಕ ವೃತ್ತ, ಬೆಂಗಳೂರು.
2) ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನ ಸೌಧ ರವರ ಆಪ್ತ ಕಾರ್ಯದರ್ಶಿಗಳು.
3) ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ, ವಿಧಾನ ಸೌಧ ರವರ ಆಪ್ತ ಕಾರ್ಯದರ್ಶಿಗಳು.
4) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ.
5) ಕುಲಪತಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
6) ನಿರ್ದೇಶಕರು(ಪಂ.ರಾಜ್-1), ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ.
7) ಮುಖ್ಯಸ್ಥರು, ಗ್ರಾಮ ಸ್ವರಾಜ್ ಯೋಜನೆ.
8) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಬೆಳಗಾವಿ ಜಿಲ್ಲಾ ಪಂಚಾಯತಿ.
9) ಕಾರ್ಯನಿರ್ವಾಹಕ ಅಧಿಕಾರಿಗಳು, ಸವದತ್ತಿ ತಾಲ್ಲೂಕು ಪಂಚಾಯತಿ, ಬೆಳಗಾವಿ ಜಿಲ್ಲೆ.
10) ಸಂಗ್ರಹಣಾಧಿಕಾರಿಗಳು, ಗ್ರಾಮ ಸ್ವರಾಜ್ ಯೋಜನೆ.
11) ಗಣಕಕೋಶ – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
12) ಹೆಚ್ಚುವರಿ ಪ್ರತಿ/ಶಾಖಾ ರಕ್ಷಕ ಕಡತ.

ಪ್ರತಿಯನ್ನು ಮಾಹಿತಿಗಾಗಿ:

1) ಮಾನ್ಯ ಗ್ರಾ.ಅ. ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ.
2) ಪ್ರಧಾನ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾ.ಅ. & ಪಂ.ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.